744 (1223) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) –ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) 2005–06 ಹಾಗೂ 2006–07 ನೇ ಸಾಲಿನಲ್ಲಿ ಭಾಲ್ಕಿ ತಾಲ್ಲೂಕಿಗೆ ಬೆಳೆ ವಿಮೆಗಾಗಿ ಬಿಡುಗಡೆ ಮಾಡಲಾದ ಹಣವೆಷ್ಟು,

(ಆ) ಈ ತಾಲ್ಲೂಕಿನ ರೈತರಿಗೆ ಬೆಳೆ ವಿಮೆಯಲ್ಲಿ ಇಲ್ಲಿಯವರೆಗೆ ನೀಡಿರುವ ಹಣವೆಷ್ಟು,

(ಇ) ಬೆಳೆ ವಿಮೆಯಲ್ಲಿ ಉಳಿದಿರುವ ಹಣವನ್ನು ಅಲ್ಲಿಯ ರೈತರಿಗೆ ವಿತರಿಸಲಾಗುವುದೇ (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) –

(ಅ) 2005–06 ಹಾಗೂ 2006–07 ನೇ ಸಾಲಿನಲ್ಲಿ ಭಾಲ್ಕಿ ತಾಲ್ಲೂಕಿಗೆ ಬೆಳೆ ವಿಮೆಗಾಗಿ ಬಿಡುಗಡೆ ಮಾಡಲಾದ ಹಣ 2005–06ರಲ್ಲಿ 230 12 ಲಕ್ಷ ರೂ ಗಳು 2006–07ರಲ್ಲಿ 318 22 ಲಕ್ಷ ರೂ ಗಳು (ಸದ್ಯದಲ್ಲೇ ವಿತರಿಸಲಾಗುವುದು)

(ಆ) ಯೋಜನೆಯು ಪ್ರಾರಂಭವಾದಾಗಿನಿಂದ 2005–06 ನೇ ಸಾಲಿನವರೆವಿಗೆ ಒಟ್ಟು ರೂ 1151 46 ಲಕ್ಷಗಳನ್ನು ವಿತರಿಸಲಾಗಿದೆ

(ಇ) ಹೌದು 2006 ರ ಮುಂಗಾರು ಹಂಗಾಮಿನ ಪರಿಹಾರ ನೀಡುವಿಕೆಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರತೊಡನೆಯೇ ವಿತರಿಸಲಾಗುವುದು

745 (288) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) –ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಬೆಂಗಳೂರು ನಗರದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳ ಸಂಖ್ಯೆ ಎಷ್ಟು,

(ಆ) ಈ ಹಾಪ್‌ಕಾಮ್ಸ್ ತೋಟಗಾರಿಕೆ ಇಲಾಖೆಯ ಆಡಳಿತಾತ್ಮಕ ನಿಯಂತ್ರಣ ಇಟ್ಟುಕೊಳ್ಳಲು ನಿರ್ಧರಿಸಲಾಗಿದೆಯೇ,

(ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು,

(ಈ) ಸಹಕಾರ ಇಲಾಖೆಯ ಉಸ್ತುವಾರಿಯಲ್ಲಿರತಕ್ಕ ಹಾಪ್‌ಕಾಮ್ಸ್ ಮೇಲೆ ತೋಟಗಾರಿಕೆ ಇಲಾಖೆ ನಿಯಂತ್ರಣ ಮಾಡುವ ನಿರ್ಧಾರವನ್ನು ಸರ್ಕಾರ ಹಿಂದಕ್ಕೆ ಪಡೆಯಲಾಗುವುದೇ ?

ಶ್ರೀ ಶಶಿಕಾಂತ ಅ ನಾಯಕ (ತೋಟಗಾರಿಕೆ ಸಚಿವರು) –

(ಅ) ಬೆಂಗಳೂರು ನಗರದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳ ಸಂಖ್ಯೆ ಒಟ್ಟು 272

(ಆ) ಹೌದು